**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯ, ಕುಂದಾಪುರ.**

**ಸಿ.ಸಿ. ನಂ. 1025/2023**

**ಪಿರ್ಯಾದಿದಾರರು:** ಸರೋಜ ಜಿ ಪಟ್ವಾಲ್

**-ವಿರುದ್ಧ-**

**ಆರೋಪಿ :** ಡಾ. ಅನಂತು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಪಡೆದುಕೊಂಡ ಆರೋಪಿತನ ಹೇಳಿಕೆ**

**ಪ್ರಶ್ನೆ-1:** ಸದರಿ ಪ್ರಕರಣದಲ್ಲಿ ದೂರುದಾರರು ತಮ್ಮ ಪರ ನೀಡಿರುವ ಸಾಕ್ಷ್ಯ ವಿಚಾರಣೆಗಳನ್ನು ಕೇಳಿ ತಿಳಿದುಕೊಂಡಿದ್ದೀರ?

**ಉತ್ತರ:**

**ಪ್ರಶ್ನೆ-2:** ಸದರಿ ಪ್ರಕರಣದಲ್ಲಿ ದೂರುದಾರರು ಹಾಜರು ಪಡಿಸಿರುವ ದಾಖಲಾತಿಗಳನ್ನು ನೋಡಿದ್ದೀರ ಹಾಗೂ ಅದರ ಬಗ್ಗೆ ವಕೀಲರ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೀರ?

**ಉತ್ತರ:**

**ಪ್ರಶ್ನೆ-3:** ಪ್ರಾಸಾ-1/ಸರೋಜ ರವರು ತನ್ನ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಈ ಪ್ರಕರಣದ ಆರೋಪಿತರಾದ ತಾವು ಅವರಿಂದ ಪಡೆದ ಕೈ ಸಾಲದ ಮರುಪಾವತಿಗಾಗಿ 28579 ಮತ್ತು 28580 ಸಂಖ್ಯೆಯುಳ್ಳ ದಿನಾಂಕ 10/10/2014ರ ಎರಡು ಚೆಕ್ಕನ್ನು ತಲಾ ರೂಪಾಯಿ 5,00,000/-ಕ್ಕೆ ಬರೆದು ಕೊಟ್ಟಿರುತ್ತೀರಿ ಎಂದು ನುಡಿದು ಸದರಿ ಚೆಕ್ಕನ್ನು ನಿಪಿ-1 ಮತ್ತು ನಿಪಿ-2 ಅಂತ ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

**ಉತ್ತರ:**

**ಪ್ರಶ್ನೆ-4:** ಪ್ರಾಸಾ-1 ರವರು ತನ್ನ ಮಂದುವರಿದ ಸಾಕ್ಷ್ಯದಲ್ಲಿ ತಾವು ಕೊಟ್ಟ ಚೆಕ್ಕನ್ನು ನಗದೀಕರಣಕ್ಕಾಗಿ ಅವರು ಬ್ಯಾಂಕಿನಲ್ಲಿ ಹಾಜರು ಪಡಿಸಿದಾಗ “ಸಾಕಷ್ಟು ಮೊತ್ತವಿಲ್ಲ" ಎಂಬ ಹಿಂಬರಹಗಳನ್ನು ಸದರಿ ಎರಡು ಚೆಕ್ಕುಗಳು ವಾಪಾಸ್ಸಾಯಿತು ಎಂದು ಸಾಕ್ಷ್ಯ ನುಡಿದು ಹಿಂಬರಹವನ್ನು ನಿಪಿ-3 ಮತ್ತು ನಿಪಿ-4 ಅಂತ ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

**ಉತ್ತರ:**

**ಪ್ರಶ್ನೆ-5:** ಪ್ರಾಸಾ-1 ರವರು ತನ್ನ ಮುಂದುವರಿದ ಸಾಕ್ಷ್ಯದಲ್ಲಿ, ನಿಮಗೆ ವಿಷಯ ತಿಳಿಸಿ ವಕೀಲರ ಮೂಲಕ ಎರಡು ನೋಟಿಸ್ ಕೊಡಿಸಿದ್ದು, ಸದರಿ ನೋಟಿಸ್ಸನ್ನು ತಾವು ಸ್ವೀಕರಿಸಿದ ನಂತರವೂ ತಾವು ಹಣವನ್ನು ಮರುಪಾವತಿ ಮಾಡಿರುವುದಿಲ್ಲವೆಂದು ಸಾಕ್ಷ್ಯಾ ನುಡಿದು, ಸದರಿ ಎರಡು ನೋಟಿಸ್ಸು ಮತ್ತು ಎರಡು ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ ನಿಪಿ-5 ರಿಂದ ನಿಪಿ-8 ಅಂತ ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

**ಉತ್ತರ:**

**ಪ್ರಶ್ನೆ-6:** ಪ್ರಾಸಾ-1 ರವರು ತನ್ನ ಮುಂದುವರಿದ ಸಾಕ್ಷ್ಯದಲ್ಲಿ ಆರೋಪಿತರಾದ ತಮ್ಮ ಖಾತೆಗೆ ಸ್ವಲ್ಪ ಸ್ವಲ್ಪ ಹಣವನ್ನು ಹಾಕಿರುವ ಬಗ್ಗೆ ನಾಲ್ಕು ರಶೀದಿಗಳನ್ನು ಹಾಜರುಪಡಿಸಿ ನಿಪಿ-9 ರಿಂದ ನಿಪಿ-12 ಅಂತ ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

**ಉತ್ತರ:**

**ಪ್ರಶ್ನೆ-7:** ತಮ್ಮ ಪರವಾಗಿ ಏನಾದರೂ ಪ್ರತಿರಕ್ಷ್ಯಾ ಸಾಕ್ಷಿ ಇದೆಯಾ?
**ಉತ್ತರ:**

**ಪ್ರಶ್ನೆ-8:** ಈ ಪ್ರಕರಣದ ಬಗ್ಗೆ ತಾವು ಏನಾದರೂ ಹೇಳುವುದು ಇದೆಯಾ?
**ಉತ್ತರ:**

**ಮೇಲೆ ಹೇಳಿದ ಪ್ರಶ್ನೆಗಳನ್ನು ಆರೋಪಿಗೆ ನನ್ನ ವಾಗ್ಮೂಲದಲ್ಲಿ ತಿಳಿಸಲಾಗಿ, ಅವರಿಂದ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿದ್ದಾಗಿ ದೃಢೀಕರಿಸಿದ್ದೇನೆ.**

**(ಮಂಜುಳ ಬಿ.)**
**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.**